**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 198/2019** **ದಿನಾಂಕಃ 24.03.2026**

**ಸಿ ಡಬ್ಲೂ : 1**

**ಪಿ ಡಬ್ಲೂ : 1**

-------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಲಕ್ಷ್ಮಣ ರೇವಣ್ಣಾ ಬಿರಾದಾರ |
| ಗಂಡ/ ತಂದೆಯ ಹೆಸರು | ರೇವಣ್ಣಾ |
| ವಯಸ್ಸು | 48 ವರ್ಷ |
| ಉದ್ಯೋಗ | ಟೇಲರಿಂಗ್ |
| ವಾಸಸ್ಥಳ | ಸಾಃ ಅಥಣಿ |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 2 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ 4 ನನ್ನ ಹೆಂಡತಿ. ಚಾಸಾ 5 ನನ್ನ ಮಗ. ಆರೋಪಿತರ ಪರಿಚಯ ಇರುತ್ತದೆ. ನಾವು ಆರೋಪಿತರ ಮನೆಯಲ್ಲಿ ಬಾಡಿಗೆಗೆ ಇದ್ದೆವು.

ನನ್ನ ಮಗ ಮತ್ತು ಆತನ ಇನ್ನೊಬ್ಬನ ಗೆಳೆಯ ನ ಜೊತೆ ಆಟ ಆಡಲು ಮನೆಯ ಹತ್ತಿರ ಇರುವ ವಿವೇಕಾನಂದ ಶಾಲೆಯ ಗ್ರೌಂಡನಲ್ಲಿ ಆಟ ಆಡಲು ಹೋದಾಗ ಇಬ್ಬರ ಮದ್ಯೆ ಸಣ್ಣ ಪುಟ್ಟದಾಗಿ ಜಗಳವಾಗಿದ್ದು ಆ ಜಗಳದಲ್ಲಿ ಆರೋಪಿತರ ಮನೆಯ ಹುಡುಗ ಮದ್ಯೆ ಹೋಗಿದ್ದು ಆಗ ಅವನಿಗೆ ನನ್ನ ಮಗ ಹೊಡೆದಿರುತ್ತಾನೆ ಅಂತಾ ಸದರಿ ವಿಷಯಕ್ಕೆ ಸಂಬಂದಪಟ್ಟಂತೆ ಆರೋಪಿತರೆಲ್ಲರೂ ದಿಃ 13.01.2018 ರಂದು ಮಧ್ಯಾಹ್ನ 2.30 ಗಂಟೆ ಸುಮಾರಿಗೆ ನಮ್ಮ ಮನೆಯ ಮುಂದೆ ಬಂದು ನನಗೆ ಅವಾಚ್ಯವಾಗಿ ಬೈಯುತ್ತಾ ನಿಮ್ಮ ಮಗ ನಮ್ಮ ಹುಡುಗನಿಗೆ ಹೊಡೆದಿರುತ್ತಾನೆ ನೀವು ಮನೆ ಖಾಲಿ ಮಾಡಿ ಅಂತಾ ಹೇಳುತ್ತಾ ನನಗೆ ಹೊಡೆ ಬಡೆ ಮಾಡಿದ್ದು ಅಲ್ಲದೆ ಒಂದು ಚಾಕುವಿನಿಂದ ನನಗೆ ಹಲ್ಲೆ ಮಾಡಲು ಪ್ರಯತ್ನಿಸಿದ್ದು ನಾನು ತಡೆಯಲು ಹೋದಾಗ ನನ್ನ ಬಲಗೈನ ಅಂಗೈಗೆ ಹಾಗೂ ಎಡಗೈನ ಬೆರಳಿಗೆ ರಕ್ತ ಗಾಯವಾಗಿರುತ್ತದೆ. ನಂತರ ನನ್ನ ಮಗ ಮತ್ತು ನನ್ನ ಹೆಂಡತಿ ರವರಾದ ಚಾಸಾ 4 ಮತ್ತು 5 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ . ನಂತರ ಆರೊಪಿತರು ನನಗೆ ಜೀವಸಹಿತ ಬಿಡುವುದಿಲ್ಲ ಅಂತಾ

ಜೀವದ ದಮಕಿ ಹಾಕಿ ಹೋಗಿರುತ್ತಾರೆ. ನಂತರ ನಾನು ಅಥಣಿಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ವೈದ್ಯರು ನನ್ನ ಕೈಗೆ ಚಾಕುವಿನಿಂದ ಹರಿತದ ಗಾಯವಾಗಿದ್ದರಿಂದ ಹೊಲಿಗೆಗಳನ್ನು ಹಾಕಿರುತ್ತಾರೆ. ಸದರಿ ವಿಷಯಕ್ಕೆ ಸಂಬಂದಪಟ್ಟಂತೆ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಸದರಿ ದೂರನ್ನು ತೋರಿಸಲಾಗಿ ಸಾಕ್ಷಿ ದೂರನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಸದರಿ ದೂರನ್ನು ನೀಡಿದ ನಂತರ ಪೊಲೀಸುರು 6.00 ಗಂಟೆ ಸುಮಾರಿಗೆ ಎಫ್ ಐ ಆರ್ ನ್ನು ದಾಖಲು ಮಾಡಿಕೊಂಡಿರುತ್ತಾರೆ.

ದಿಃ 14.01.2018 ರಂದು ಬೆಳಿಗ್ಗೆ 8.30 ರಿಂದ 9.30 ವರೆಗೆ ಪೊಲೀಸರಿಗೆ ನಾನು ಘಟನಾ ಸ್ಥಳವನ್ನು ತೋರಿಸಿದ್ದು ಪೊಲಿಸರು ಪಂಚರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ.

ಪೊಲೀಸರು ಪ್ರಕರಣಕ್ಕೆ ಸಂಬಂದಪಟ್ಟಂತೆ ಪುನರ್ ಹೇಳಿಕೆ ಪಡೆದುಕೊಂಡಿರುತ್ತಾರೆ. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 1 ಮತ್ತು 3 ರಿಂದ 5ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಿದ್ದು ಸಾಕ್ಷಿ ಸದರಿಯವರನ್ನು ನೋಡಿ ಗುರುತಿಸಿರುತ್ತಾರೆ. 2ನೇ ಆರೋಪಿ ಗೈರು ಹಾಜರಿದ್ದು ಸದರಿಯವರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇರುವುದಿಲ್ಲ ಅಂತಾ ಆರೋಪಿ ಪರ ವಕೀಲರು ಹೇಳಿರುತ್ತಾರೆ. ನಾನು ಆರೋಪಿತರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಚಾಕು ನೋಡಿದರೆ ಗುರುತಿಸುತ್ತೇನೆ. ಮು ಮಾ ನ್ಯಾಯಾಲಯದ ಮುಂದೆ ಇರದ ಕಾರಣ ಸ.ಸ.ಅ ರವರು ಮುಂದುವರೆ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.